ಶ್ರೀ ಎಸ್. ಆರ್. ಬೊಮ್ಮಾಯಿ.—ಕಾರ್ಪೊರೇಷನ್‌ಗೆ ಸಂಬಂಧದ ಪ್ರಶ್ನೆ ಅಲ್ಲ. ವೃತ್ತಿ ತೆರಿಗೆಯನ್ನು ಸುಮಾರು 11 ಲಕ್ಷ ಜನ ಕಟ್ಟಬೇಕಾಗಿತ್ತು. ರಿಯಾಯಿತಿ ಕೊಟ್ಟಿರುವುದರಿಂದ 10 ಲಕ್ಷ ಜನಕ್ಕೆ ಅನುಕೂಲವಾಗಿದೆ. ಇನ್ನು ಒಂದು ಲಕ್ಷ ಜನ ಮಾತ್ರ ವೃತ್ತಿ ತೆರಿಗೆಯನ್ನು ಕಟ್ಟಬೇಕಾಗಿದೆ. ವೃತ್ತಿ ತೆರಿಗೆಯನ್ನು ತೆಗೆದುಹಾಕಿರುವುದರಿಂದ ನಗರಸಭೆಗಳಿಗೆ ಬರತಕ್ಕಂತ ಆದಾಯ ಕಡಿಮೆಯಾಗಿದೆ. ಇದರಲ್ಲಿ ನೂರಕ್ಕೆ ನೂರರಷ್ಟು ನಗರಸಭೆಗೆ ಹೋಗುವಂಥ ನಿರ್ಣಯ ತೆಗೆದುಕೊಂಡಿದೆ. ನಗರಸಭೆಗಳಿಗೆ ಚುನಾವಣೆಗಳು ಆದಮೇಲೆ ಅವರ ಅಭಿಪ್ರಾಯ ತೆಗೆದುಕೊಂಡು ವಿಚಾರ ಮಾಡಲಾಗುವುದು.

ಶ್ರೀ ವಿ. ಎಸ್. ಆಚಾರ್ಯ.—ನಗರಸಭೆಯವರಿಂದ ಕಿತ್ತುಕೊಳ್ಳುವಾಗ ಅವರನ್ನು ಕೇಳಿದ್ದರೇನು ? ಒಂದು ಲಕ್ಷ ಜನರು ಏನು ವೃತ್ತಿ ತೆರಿಗೆ ಕೊಡಬೇಕಾಗಿದೆ. ಇದರಲ್ಲಿ ನಗರಸಭೆಗೆ ಎಷ್ಟು ಹೋಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಗರಸಭೆಯವರನ್ನು ಕೇಳಿದ್ದರೋ ಬಿಟ್ಟಿದ್ದರೋ ನಮಗೆ ಗೊತ್ತಿಲ್ಲ. ಅದು ದಾಖಲೆಯಲ್ಲಿ ಇಲ್ಲ. ಈ ತೆರಿಗೆಯನ್ನು ನಗರಸಭೆಯವರು ವಸೂಲು ಮಾಡುತ್ತಿದ್ದರು. ಸರ್ಕಾರದವರು ತೆಗೆದುಕೊಂಡ ಮೇಲೆ ಆದಾಯ ಹೆಚ್ಚಾಗಿದೆ. ಬಹುಪಾಲು ನಗರಸಭೆಯವರಿಗೆ ಕೊಡುತ್ತಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಶಾಸಕರನ್ನು ವೃತ್ತಿತೆರಿಗೆ ಕಕ್ಷೆಯಿಂದ ತೆಗೆದುಹಾಕುವುದಕ್ಕೆ ಆಗುವುದಿಲ್ಲ ವೆಂದು ಹೇಳಿದ್ದೀರಿ. ಸಾರ್ವಜನಿಕ ಸೇವೆ ಮಾಡುವಂಥ ಜನಗಳಿಗೂ ತಾವು ಏತಕ್ಕೆ ವಿನಾಯಿತಿ ಕೊಡಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಶಾಸಕರಾದವರಲ್ಲಿ ಕೆಲವರು ಡಾಕ್ಟರುಗಳು, ವಕೀಲರುಗಳು ಇರಾತ್ತಾರೆ. ಈ ನೀತಿಯಿಂದ ಶಾಸಕರನ್ನು ದೂರ ಇಡಬಾರದೆಂಬುದು ಸರ್ಕಾರದ ಇಚ್ಛೆಯಾಗಿದೆ.

ಶಹಾಬಾದ್‌ನಲ್ಲಿ ಸಾರ್ವಜನಿಕ ಆಸ್ಪತ್ರೆ ಕಟ್ಟುವ ಬಗ್ಗೆ.

170. ಶಾನಪ್ಪ ಬಿಂಪ(ಷಹಬಾದ್).—ಆರೋಗ್ಯ ಮತ್ತು ಕುಟುಂಬ ಆಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

ಅ) ಶಹಬಾದ್ ಜನಗಳ ಸೌಕರ್ಯಕ್ಕಾಗಿ ಸಾರ್ವಜನಿಕ ಆಸ್ಪತ್ರೆಯ ಆವಶ್ಯಕತೆಯಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸಾರ್ವಜನಿಕ ಆಸ್ಪತ್ರೆ ಕಟ್ಟಲು ಕ್ರಮಗಳನ್ನು ಸರ್ಕಾರದವರು ಕೈಗೊಂಡಿದ್ದಾರೆಯೆ;

ಇ) ಎಷ್ಟು ಹಾಸಿಗೆಗಳ ಆಸ್ಪತ್ರೆ ಕಟ್ಟಲು ನಿರ್ಧರಿಸಲಾಗಿದೆ ;

ಈ) ಸಾರ್ವಜನಿಕ ಆಸ್ಪತ್ರೆ ಕಟ್ಟಲು ಎಂದು ಆರಂಭಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಆಲಾಖೆಯ ರಾಜ್ಯ ಸಚಿವರು) :—

ಅ) ಹೌದು.

ಆ) ಹೌದು.

ಇ) 30 ಹಾಸಿಗೆಗಳು

ಈ) ಈ ಕಾಮಗಾರಿ ಮುಂಜುರಾದ ಕೂಡಲೇ ಅಗತ್ಯವಾದ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಬಿ. ಶಾನಪ್ಪ.—ಈ ಯೋಜನೆಯನ್ನು 1972ರಲ್ಲಿಯೇ ಮಂಜೂರು ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಈ ಮನೆಯನ್ನು ಮಿಸ್‌ಲೀಡ್ ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ. 27-3-82ನೇ ಇಸವಿ ಸರ್ಕಾರೀ ಆಜ್ಞೆಪ್ರಕಾರ ಮೂವತ್ತು ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡಿರುವುದು ಸರಿಯಷ್ಟೆ. ಇಲ್ಲ ಎಂದು ನಾನು ಹೇಳಿಲ್ಲ. 1982-83ನೇ ಇಸವಿಯಲ್ಲಿ ಇದಕ್ಕೋಸ್ಕರ ಎರಡು ಲಕ್ಷ ರೂಪಾಯಿಗಳನ್ನು ಇಟ್ಟಿರುವುದು ನಿಜವೇ. ಆಡಳಿತಾತ್ಮಕ ಒಪ್ಪಿಗೆ ಬಗ್ಗೆ ತಾಂತ್ರಿಕ ಮಂಜೂರಾತಿ ಬಗ್ಗೆ ಪ್ರೊಸೆಸ್ ನಡೆಯುತ್ತಿದೆ.

ಶ್ರೀ ಕೆ. ಬಿ. ಶಾನಪ್ಪ.—ಎಷ್ಟು ಲಕ್ಷ ರೂಪಾಯಿಗಳು ಮಂಜೂರಾಗಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಎರಡು ಲಕ್ಷ ರೂಪಾಯಿಗಳು ಮಂಜೂರಾಗಿದೆ.

ಧಾರವಾಡ ಸರ್ಕಾರೀ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ಘಟಕ ಸ್ಥಾಪಿಸುವ ಬಗ್ಗೆ

171. ಶ್ರೀ ಎಸ್. ಆರ್. ಮೋತಿ(ಧಾರವಾಡ).—ಆರೋಗ್ಯ ಮತ್ತು ಕುಟುಂಬ ಆಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಧಾರವಾಡ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ಘಟಕ (ಇನ್‌ಟೆನ್ಸೀವ್ ಕೇರ್ ಯೂನಿಟ್) ಸ್ಥಾಪಿಸಬೇಕೆಂಬ ಸಲಹೆ ಸರ್ಕಾರದಲ್ಲಿದೆಯೆ ;

ಆ) ಹಾಗಿದ್ದಲ್ಲಿ ಈಗಿರುವ ಹಾಸಿಗೆಗಳ ಸಂಖ್ಯೆಯನ್ನು 250ಕ್ಕೆ ಏರಿಸಲಾಗುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಆಲಾಖೆಯ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಪರಿಶೀಲಿಸಲಾಗುವುದು.